ಬಂಟ್ವಾಳ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ

ದಂಡಾಧಿಕಾರಿಯವರ ನ್ಯಾಯಾಲಯ.

**ಸಿ ಸಿ ನಂ. ಃ 220/2020**

ಪಿ ಡಬ್ಲ್ಯು - 4

ಸಿ **ಡಬ್ಲ್ಯು** ಃ 7

**ಹೆಸರು** ಃ ಶ್ರೀ ಕುಮಾರ್

ತಂದೆಯ **ಹೆಸರು** ಃ ದಿ ಹೆಚ್ ಶ್ರೀನಿವಾಸ ಭಟ್

**ವಯಸ್ಸುಃ 45 ವರ್ಷ**

**ಉದ್ಯೋಗಃ** ಮುಖ್ಯ ಪೇದೆ **668,** ವಿಟ್ಲ ಪೊಲೀಸ್ ಠಾಣೆ

**ವಾಸಸ್ಥಳ** ಃ ವೇಣೂರು

---

**ದಿಃ 03.10.202024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ** ನಾನು **2016** ರಿಂದ **2021** ರ ವರೆಗೆ ಪುಂಜಾಲಕಟ್ಟೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ದಿ. **09.10.2019** ರಂದು ಸಂಜೆ 05.30 ಗಂಟೆಯ ವೇಳೆಗೆ ಠಾಣಾ ಕರ್ತವ್ಯದಲ್ಲಿದ್ದಾಗ ಈ ಕೇಸಿನ ಪಿರ್ಯಾದುದಾರರಾದ ಬಂಟ್ವಾಳ ತಾಲೂಕು ಅಜ್ಜಿಬೆಟ್ಟು ಗ್ರಾಮದ ಚಾಸಾ-1 ಸಂಧ್ಯಾರವರು ಠಾಣೆಗೆ ಬಂದು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಠಾಣಾ ಗುನ್ನಾ ಸಂಖ್ಯೆಃ 90/2019 ರಲ್ಲಿ ಕಲಂ 504, 506 ಐಪಿಸಿ ಮತ್ತು 67 ಎ ಐಟಿ ಆಕ್ಟ್ ರಂತೆ ಪ್ರಕರಣ ದಾಖಲಿಸಿ, ಪ್ರಥಮ ವರ್ತಮಾನ ವರದಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು ಮೇಲಧಿಕಾರಿಯವರಲ್ಲಿ ನಿವೇದಿಸಿಕೊಂಡಿರುತ್ತೇನೆ. ನಿಪಿ-1 ದೂರಿನಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-1ಬಿ ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿ ನಿಪಿ-4 ಎಂದು ಸಾಕ್ಷಿ ಸಹಿ ನಿಪಿ-4ಎ ಎಂದು ಗುರುತಿಸಲಾಯಿತು.

2. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-8ರವರಿಗೆ ನಿವೇದಿಸಿಕೊಂಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎಂ ವಿ ವಕೀಲರಿಂದಃ

1. ನಾನು ಸ್ವೀಕರಿಸಿದ ದೂರಿನ ಪ್ರಕಾರ ಘಟನೆ ಆದದ್ದು ದಿನಾಂಕ 29.08.2019ರಂದು ಮತ್ತು ದಿನಾಂಕ 05.10.2019ರಂದು ಎಂದರೆ ಸರಿ. ಚಾಸಾ-1 ಸಂಧ್ಯಾರವರು ದಿನಾಂಕ 09.10.2019ರಂದು ಸಂಜೆ 05.30 ಗಂಟೆಗೆ ಠಾಣೆಗೆ ಬಂದು ದೂರು ನೀಡಿರುತ್ತಾರೆ. ಮೊದಲ ಘಟನೆ ಆದ ದಿವಸದಿಂದ ನಮ್ಮಲ್ಲಿ ದೂರು ನೀಡಿಲು 41 ದಿನ ವಿಳಂಬವಾಗಿದೆ ಎಂದರೆ ಸರಿ. ಚಾಸಾ-1 ರವರು ದೂರಿನಲ್ಲಿ ತಿಳಿಸಿದಂತೆ ದಿನಾಂಕ 29.08.2019ರ ಮರುದಿವಸ ಠಾಣೆಗೆ ಬಂದು ದೂರು ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ದೂರು ನೀಡಲು ಠಾಣೆಗೆ ಪಿರ್ಯಾದುದಾರರಾದ ಸಂಧ್ಯಾ ಬಂದಿದ್ದರು, ಬೇರೆ ಯಾರೂ ಬಂದಿರಲಿಲ್ಲ. ದಿನಾಂಕ 01.10.2019 ರಿಂದ ದೂರು ಕೊಡುವ ಮದ್ಯದ ಸಮಯದಲ್ಲಿ ಚಾಸಾ-1ರವರ ಗಂಡ ಚಾಸಾ-2ರವರು ಠಾಣೆಗೆ ಬಂದದ್ದುಂಟಾ ಎಂದರೆ ನನಗೆ ಗೊತ್ತಿಲ್ಲ. ದೂರು ಕೊಡಲು ವಿಳಂಬವಾದ ಬಗ್ಗೆ ಚಾಸಾ-1ರವರಲ್ಲಿ ವಿಚಾರಿಸಿಲ್ಲ. ಪ್ರಥಮ ವರ್ತಮಾನ ವರದಿಯ 3ನೇ ಖಂಡಿಗೆಯ ಸಿ ಕಾಲಂ ನಲ್ಲಿ ದೂರು ಕೊಡಲು ವಿಳಂಬವಾದ ಬಗ್ಗೆ ತಿಳಿಸಿಲ್ಲ. ಯಾವ ಕಾರಣದಿಂದ ತಿಳಿಸಿಲ್ಲ ಎಂದರೆ ಸಾಕ್ಷಿ ಪಿರ್ಯಾದುದಾರರು ನನ್ನಲ್ಲಿ ಹೇಳಲಿಲ್ಲವಾದ ಕಾರಣ ವಿಳಂಬವಾದ ಬಗ್ಗೆ ಎಫ್ ಐ ಆರ್ ನಲ್ಲಿ ನಮೂದಿಸಿಲ್ಲ.

ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಪಿಸಿ 2329ರವರ ಮೂಲಕ ಕಳುಹಿಸಿರುತ್ತೇನೆ. ನಾನು ಯಾರೋ ತಯಾರು ಮಾಡಿದಂತಹ ಪ್ರಥಮ ವರ್ತಮಾನ ವರದಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಪ್ರಥಮ ವರ್ತಮಾನ ವರದಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಆದ ಕಾರಣ ವಿಳಂಬವಾದ ಬಗ್ಗೆ ಕಾರಣ ನಮೂದಿಸಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ಆಗದಿದ್ದರೂ ಸುಳ್ಳು ದೂರು ಸ್ವೀಕರಿಸಿ ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**ಓ ಹೇ ಕೇ ಸ ಇದೆ.**

**ಹಿರಿಯ ಸಿವಿಲ್‌ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಬಂಟಾ**